THE TIMES OF INDIA

Online Newspaper Clipping Service
**Dtd- Tuesday, 20th, March- 2018**

**Page No. 05**

# Medical students wait for hours as KEA server crashes

TIMES NEWS NETWORK

**Bengaluru:** It was a long and tiring wait for around 1,200 medical and dental students at the Karnataka Examination Authority (KEA) premises in Malleswaram on Monday as the server crashed before commencement of the document verification process.

The aspiring doctors were accompanied by their parents and relatives for document verification, conducted as part of the centralized and combined counselling for admission to postgraduate medical and dental (degree and diploma) courses for 2018-19. It's the final step in the counselling process.

"We were told to report at the KEA office at 8.15am as the process was to commence at 9am. We arrived on time and waited. Verification of documents should ideally take anywhere between 8 and 10 minutes and we were hoping to leave early. But the process didn't start and KEA authorities said the server was down," said Ramkiran, relative of a medical student from Chennai.

KEA officials had made arrangements to ensure the process was smooth; they had also announced setting up of 60 counters for the purpose. "But none was functional because of technical issues," said a student.

"They repeatedly told us the process would start soon but the wait extended to a whopping eight hours," said an exasperated parent, adding: "I went out and brought lunch while my sister waited in the queue as there was no information on when the process would begin and we didn't want to take chances. We don't know why there is so hype about going digital when the IT capital of the country continues to grapple with server-related issues."



**STRESSED OUT:** The problem also affected the travel plans of hundreds of candidates

The problem also affected the travel plans of hundreds of candidates. "We had booked our return flight to Hyderabad at 5.30pm hoping the process would be over by then. But we have been forced to change our travel plans," said Tarun, a parent.

A KEA official told **TOI:** "The process is taking longer than usual as the server is down. We are working towards expediting it from Tuesday."

Late in the evening, parents even complained of the printer not functioning, due to which they couldn't get acknowledgement slips.

The aspirants have been divided into different batches (each containing 1,200 students) and the verification for Indian students is scheduled to be held till March 23. The merit list (rank list) will be published at the end of the document verification process.

# ವೈದ್ಯಕೀಯ ಮಹಾವಿದ್ಯಾಲಯ ಘಟಿಕೋತ್ಸವ ನಾಳೆ

## ಆರು ವಿದ್ಯಾರ್ಥಿಗಳಿಗೆ ಚಿನ್ನದ ಪದಕ | ಡಾ.ಎಚ್.ಸುದರ್ಶನ್ ಬಲ್ಲಾಳ್ ಘಟಿಕೋತ್ಸವ ಭಾಷಣ

■ ವಿಜಯವಾಣಿ ಸುದ್ದಿಜಾಲ ಕೋಲಾರ

ದೇವರಾಜು ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆ 8ನೇ ಘಟಿಕೋತ್ಸವ ಮಾ.21ರ ಬೆಳಗ್ಗೆ 11 ಗಂಟೆಗೆ ವೈದ್ಯಕೀಯ ಕಾಲೇಜಿನ ರಜತ ಮಹೋತ್ಸವ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಉಪ ಕುಲಪತಿ ಡಾ.ಸಿ.ವಿ.ರಘುವೀರ್ ತಿಳಿಸಿದರು.

ಬೆಂಗಳೂರಿನ ಮಣಿಪಾಲ್ ಹೆಲ್ತ್ ಎಂಟರ್‌ಪ್ರೈಸಸ್ ಪ್ರೈವೇಟ್ ಲಿಮಿಟೆಡ್‌ನ ಅಧ್ಯಕ್ಷ ಡಾ.ಎಚ್.ಸುದರ್ಶನ್ ಬಲ್ಲಾಳ್ ಘಟಿಕೋತ್ಸವ ಭಾಷಣ ಮಾಡುವರು. ಸಂಸ್ಥೆಯ ಕುಲಪತಿ ಡಾ.ಎಸ್.ಕುಮಾರ್ ಅಧ್ಯಕ್ಷತೆ ವಹಿಸುವರು. ಉಪ ಕುಲಪತಿ ಡಾ.ಸಿ.ವಿ.ರಘುವೀರ್ ಮಹಾವಿದ್ಯಾಲಯ ವರದಿ ವಾಚಿಸುತ್ತಾರೆ. ಸಂಸ್ಥೆ ಉಪಾಧ್ಯಕ್ಷ ಡಾ.ರಾಜೇಶ್ ಎನ್.ಜಗದಾಳೆ ಭಾಗವಹಿಸುವರು ಎಂದು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.



ಡಾ.ಎನ್. ಮೌನಿಕಾ



ಡಾ. ಸಿ. ಸೌಮ್ಯಾ



ಡಾ. ಕೆ.ಎಮ್.ಅಭಿಷೇಕ್



ಡಾ. ಪೂಜಾ ಹರ್ಷ



ಡಾ.ಪ್ರಿಯಾಂಕದಾಸ್



ಡಾ.ಕಾವ್ಯಾ

ಪರೀಕ್ಷಾ ನಿಯಂತ್ರಾಧಿಕಾರಿ ಡಾ.ಡಿ.ವಿ.ಎಲ್.ಎನ್. ಪ್ರಸಾದ್ ಮಾತನಾಡಿ, ಘಟಿಕೋತ್ಸವದಲ್ಲಿ ಪಿಎಚ್‌ಡಿ ಮೂವರಿಗೆ, ಎಂಎಸ್ಸಿ (ಮಾಲಿಕ್ಯುಲರ್ ಬಯಾಲಜಿ ಮತ್ತು ಹ್ಯೂಮನ್ ಜಿನಿಟಿಕ್ಸ್) 4, ಎಂಬಿಬಿಎಸ್ ಪದವಿ 140, ಸ್ನಾತಕೋತ್ತರ ಪದವಿ 55, ಸ್ನಾತಕೋತ್ತರ ಡಿಪ್ಲೊಮಾ 19, ಸ್ನಾತಕೋತ್ತರ ಡಿಪ್ಲೊಮಾ ಯೋಗಾ ಪ್ರಾಕ್ಟಿಸ್ 2, ಮಾಸ್ಟರ ಆಫ್ ಲೈಬ್ರರಿ ಸೈನ್ಸ್ 2, ಎಂಎಸ್ಸಿ ಎಂಎಲ್‌ಟಿ 1 ಹಾಗೂ ಬಿಎಸ್ಸಿ ಅಲೈಡ್ ಹೆಲ್ತ್ ಸೈನ್ಸ್ 23 ಮಂದಿ ಸೇರಿ ಒಟ್ಟು 249 ಮಂದಿ ವೈದ್ಯಕೀಯ ಪದವೀಧರರಿಗೆ ಪದವಿ ಪ್ರದಾನ ಮಾಡಲಾಗುವುದು ಎಂದರು.

ಎಂಬಿಬಿಎಸ್ ವಿದ್ಯಾರ್ಥಿನಿ, ಚಿಂತಾಮಣಿ ತಾಲೂಕಿನ ಡಾ.ಮೋನಿಕಾ ಸೇರಿ ಔಷಧ ವಿಭಾಗದಲ್ಲಿ ಎಂಡಿ ಮಾಡಿರುವ ಡಾ.ಸಿ.ಸೌಮ್ಯ, ಅರವಳಿಕೆ ವಿಭಾಗದಲ್ಲಿ ಡಾ.ಕೆ.ಎಂ.ಅಭಿಷೇಕ್, ಎಂಎಸ್ (ಇಎನ್‌ಟಿ) ವಿಭಾಗದಲ್ಲಿ ಡಾ.ಪೂಜಾ ಹರ್ಷ, ಡಿಪ್ಲೋಮಾ ಅರವಳಿಕೆ ವಿಭಾಗದಲ್ಲಿ ಡಾ. ಪ್ರಿಯಾಂಕಾ ದಾಸ್, ಡಿಪ್ಲೊಮಾ ನೇತ್ರ ವಿಭಾಗದಲ್ಲಿ ಡಾ.ಕಾವ್ಯಾ ಚಿನ್ನದ ಪದಕ ಪಡೆಯಲಿದ್ದಾರೆ ಎಂದರು. ಸಂಸ್ಥೆ ರಿಜಿಸ್ಟ್ರಾರ್ ಡಾ.ಎ.ವಿ.ಎಂ.ಕುಟ್ಟಿ, ಪ್ರಾಂಶುಪಾಲ ಡಾ.ಹರೇಂದ್ರಕುಮಾರ್, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಡಿ.ವಿ.ಎಲ್.ಎನ್.ಪ್ರಸಾದ್, ಆರೋಗ್ಯ ಅಧೀಕ್ಷಕ ಡಾ.ಲಕ್ಷ್ಮಯ್ಯ ಇದ್ದರು.

# ನಾಳೆ ಅರಸು ವೈದ್ಯಕೀಯ ಕಾಲೇಜಿನ 8ನೇ ಘಟಿಕೋತ್ಸವ

## 249 ಪದವೀಧರರಿಗೆ ಪದವಿ ಪ್ರದಾನ: ಕುಲಪತಿ ಡಾ.ಸಿ.ವಿ.ರಘುವೀರ್



• **ಕನ್ನಡಪ್ರಭ ವಾರ್ತೆ** ಕೋಲಾರ

ಶ್ರೀ ದೇವರಾಜು ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯ 8ನೇ ಘಟಿಕೋತ್ಸವ ಕಾರ್ಯಕ್ರಮವನ್ನು ಮಾ.21ರಂದು ಬೆಳಿಗ್ಗೆ 11ಕ್ಕೆ ವೈದ್ಯಕೀಯ ಕಾಲೇಜಿನ ರಹಜ ಮಹೋತ್ಸವ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ' ಎಂದು ದೇವರಾಜ ಅರಸು ವೈದ್ಯೆಕೀಯ ವಿಶ್ವವಿದ್ಯಾಲಯದ ಕುಲಪತಿ ಡಾ.ಸಿ.ವಿ.ರಘುವೀರ್ ತಿಳಿಸಿದರು. ನಗರದಲ್ಲಿ ಸೋಮವಾರಪತ್ರಿಕಾಗೋಷ್ಠಿಯಲ್ಲಿಮಾತನಾಡಿ, ಘಟಿಕೋತ್ಸವದಲ್ಲಿ ಸಂಸ್ಥೆಯ 249 ಮಂದಿ ವೈದ್ಯಕೀಯ ಪದವೀಧರರಿಗೆ ಪದವಿ ಪ್ರದಾನ ಮಾಡಲಾಗುವುದು. ಸ್ನಾತಕೋತ್ತರಪದವಿಮತ್ತು ಡಿಪ್ಲೊಮಾಕೋರ್ಸ್‌ನತಲಾ5ವಿದ್ಯಾರ್ಥಿಗಳಿಗೆ ಹಾಗೂ ಎಂಬಿಬಿಎಸ್ ವಿದ್ಯಾರ್ಥಿನಿ ಡಾ. ಮೋನಿಕಾಅವರಿಗೆಚಿನ್ನದಪದಕನೀಡಲಾಗುತ್ತದೆ. ಡಾ.ಸಿ.ಸೌಮ್ಯ, ಡಾ.ಪೂಜಾ ಹರ್ಷ, ಡಾ. ಕೆ.ಎಂ.ಅಭಿಷೇಕ್, ಡಾ.ಪ್ರಿಯಾಂಕಾ ದಾಸ್, ಡಾ.ಕಾವ್ಯ ಚಿನ್ನದ ಪದಕ ಗಳಿಸಿದ್ದಾರೆ ಎಂದು ವಿವರಿಸಿದರು.

ಬೆಂಗಳೂರಿನ ಮಣಿಪಾಲ್ ಹೆಲ್ತ್ ಎಂಟರ್ ಪ್ರೈಸಸ್ ಪ್ರೈವೇಟ್ ಲಿಮಿಟೆಡ್‌ನ ಅಧ್ಯಕ್ಷ ಡಾ. ಎಚ್.ಸುದರ್ಶನ್ ಬಲ್ಲಾಳ್ ಘಟಿಕೋತ್ಸವ ಭಾಷಣ ಮಾಡುವರು. ಸಂಸ್ಥೆಯ ಕುಲಪತಿ ಡಾ.ಎಸ್.ಕುಮಾರ್ ಘೋಟಿಕೋತ್ಸವದ ಅಧ್ಯಕ್ಷತೆವಹಿಸುವರು. ಉಪ ಕುಲಪತಿ ಡಾ.ಸಿ.ವಿ.ರಘುವೀರ್ ವಿದ್ಯಾವಿದ್ಯಾಲಯದ ವರದಿ ವಾಚಿಸುತ್ತಾರೆ. ಸಂಸ್ಥೆಯ ಉಪಾಧ್ಯಕ್ಷ ಡಾ.ರಾಜೇಶ್‌ಎನ್.ಜಗದಾಳೆಭಾಗವಹಿಸುತ್ತಾರೆ ಎಂದರು.



ಚಿನ್ನದ ಪದಕ ಪಡೆದ ಎಂಬಿಬಿಎಸ್ ವಿದ್ಯಾರ್ಥಿನಿ ಡಾ.ಮೋನಿಕಾ.

ಸಂಸ್ಥೆಯ ರಿಜಿಸ್ಟ್ರಾರ್ ಡಾ.ಎ.ವಿ.ಎಂ.ಕುಟ್ಟಿ, ಪ್ರಾಂಶುಪಾಲ ಡಾ.ಹರೇಂದ್ರಕುಮಾರ್, ಪರೀಕ್ಷಾನಿಯಂತ್ರಣಾಧಿಕಾರಿಡಾ.ಡಿ.ವಿ.ಎಲ್. ಎನ್.ಪ್ರಸಾದ್, ಆರೋಗ್ಯ ಅಧೀಕ್ಷಕ ಡಾ. ಲಕ್ಷ್ಮಯ್ಯ ಗೋಷ್ಠಿಯಲ್ಲಿ ಹಾಜರಿದ್ದರು.

ಪ್ರಜಾವಾಣಿ



### ಜ್ಯೋತಿ ಸ್ವೀಕರಿಸಿದ ಭಾರತೀಯ ವೈದ್ಯಕೀಯ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಡಾ.ಎಂ.ನಾರಾಯಣಸ್ವಾಮಿ

# ಎನ್‌ಎಂಸಿ ರಚನೆ ವಿರೋಧಿಸಿ ಜಾಗೃತಿ ಜಾಥಾ

ಪ್ರಜಾವಾಣಿ ವಾರ್ತೆ

ಕೋಲಾರ: ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) ರಚನೆಗೆ ಮುಂದಾಗಿರುವ ಕೇಂದ್ರ ಸರ್ಕಾರದ ಕ್ರಮ ಖಂಡಿಸಿ ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಸದಸ್ಯರು ನಗರದಲ್ಲಿ ಸೋಮವಾರ ಜಾಥಾ ನಡೆಸಿದರು.

'ರಾಷ್ಟ್ರೀಯ ವೈದ್ಯಕೀಯ ಮಂಡಳಿ ಬದಲಿಗೆ, ಎನ್‌ಎಂಸಿ ರಚನೆಗೆ ಮುಂದಾಗಿರುವುದು ಸರಿಯಾದ ಕ್ರಮವಲ್ಲ. ಇದು ಅವೈಜ್ಞಾನಿಕ ನಿರ್ಧಾರ. ವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ. ಅದನ್ನು ಕಾನೂನುಬದ್ಧಗೊಳಿಸುವ ದುರುದ್ದೇಶದಿಂದ ಕೇಂದ್ರವು ಈ ಆಯೋಗ ರಚಿಸಲು ಮುಂದಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಶೇ 60ರಷ್ಟು ಮ್ಯಾನೇಜ್‌ಮೆಂಟ್ ಕೋಟಾ ಸೀಟುಗಳನ್ನು ಖಾಸಗಿ ವೈದ್ಯಕೀಯ, ದಂತ ವೈದ್ಯಕೀಯ




ಭಾರತೀಯ ವೈದ್ಯಕೀಯ ಸಂಘವು ರಾಷ್ಟ್ರೀಯ ವೈದ್ಯಕೀಯ ಆಯೋಗ ರಚನೆ ವಿರೋಧಿಸಿ ಕೋಲಾರದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಜಾಥಾದಲ್ಲಿ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಡಾ.ಎಂ.ನಾರಾಯಣಸ್ವಾಮಿ ಜಾಗೃತಿ ಜ್ಯೋತಿ ಸ್ವೀಕರಿಸಿದರು

ಕಾಲೇಜುಗಳು ಹಾಗೂ ಶೇ 40ರಷ್ಟು ಸೀಟುಗಳನ್ನು ಸರ್ಕಾರ ಹಂಚಿಕೆ ಮಾಡಬಹುದೆಂದು ಎನ್‌ಎಂಸಿ ಹೇಳಿದೆ. ಶೇ 60ರಷ್ಟು ಸೀಟುಗಳನ್ನು ಕಾಲೇಜುಗಳ ಆಡಳಿತ ಮಂಡಳಿಗಳಿಗೆ ಬಿಟ್ಟು ಕೊಡುವುದರಿಂದ ಸೀಟುಗಳನ್ನು ಕೋಟ್ಯಂತರ ರೂಪಾಯಿಗೆ ಮಾರುವ ಸಾಧ್ಯತೆ ಇದೆ. ಇದು ವಿದ್ಯಾರ್ಥಿಗಳಿಗೆ ಮಾರಕವಾಗಲಿದೆ' ಎಂದು ಐಎಂಎ ಜಿಲ್ಲಾ ಘಟಕದ ಅಧ್ಯಕ್ಷ ಡಾ.ಎಂ. ನಾರಾಯಣಸ್ವಾಮಿ ಹೇಳಿದರು.

'ವಿದ್ಯಾರ್ಥಿಗಳು 5 ವರ್ಷಗಳ ವೈದ್ಯಕೀಯ ಕೋರ್ಸ್ ಪೂರ್ಣಗೊಳಿಸಿದ ನಂತರ ಮತ್ತೊಮ್ಮೆ ಪ್ರತ್ಯೇಕ ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣರಾದರೆ ಮಾತ್ರ ಪ್ರಮಾಣಪತ್ರ ನೀಡಲು ಕೇಂದ್ರ ಸರ್ಕಾರ ಹೊಸ ನೀತಿ ಜಾರಿಗೆ ತರಲು ಮುಂದಾಗಿದೆ. ಇದರಿಂದ ವಿದ್ಯಾರ್ಥಿಗಳ ಮೇಲೆ ಮಾನಸಿಕ ಒತ್ತಡ ಹೆಚ್ಚುತ್ತದೆ' ಎಂದು ಬೇಸರ ವ್ಯಕ್ತಪಡಿಸಿದರು.

**ಮುಖ್ಯಾಂಶಗಳು**

- ಎನ್‌ಎಂಸಿ ರಚನೆ ಅವೈಜ್ಞಾನಿಕ ನಿರ್ಧಾರ
- ವಿದ್ಯಾರ್ಥಿಗಳ ಮೇಲೆ ಒತ್ತಡ ಹೆಚ್ಚುತ್ತದೆ
- ವೈದ್ಯಕೀಯ ಶಿಕ್ಷಣ ದುಬಾರಿಯಾಗಲಿದೆ

**ಭ್ರಷ್ಟಾಚಾರಕ್ಕೆ ದಾರಿ:** 'ಆಯುರ್ವೇದ ಮತ್ತು ಹೋಮಿಯೋಪತಿ ವೈದ್ಯರಿಗೆ 5 ತಿಂಗಳು ತರಬೇತಿ ನೀಡಿ ಎಂಬಿಬಿಎಸ್ ವೈದ್ಯರಂತೆ ಸೇವೆ ಸಲ್ಲಿಸಲು ಅನುಮತಿ ನೀಡಲು ನಿರ್ಧರಿಸಲಾಗಿದೆ. ಇದರಿಂದ ವೈದ್ಯಕೀಯ ಸೇವೆಯ ಗುಣಮಟ್ಟ ಕುಸಿದು ಸಾವು ನೋವು ಸಂಭವಿಸುವ ಅಪಾಯವಿದೆ. ವೈದ್ಯಕೀಯ ಶಿಕ್ಷಣದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಹಿಡಿತ ಹೆಚ್ಚಿ ಮತ್ತಷ್ಟು ಭ್ರಷ್ಟಾಚಾರಕ್ಕೆ ದಾರಿಯಾಗುತ್ತದೆ. ವೈದ್ಯಕೀಯ ಶಿಕ್ಷಣ ದುಬಾರಿಯಾಗಲಿದೆ' ಎಂದು ಸದಸ್ಯರು ಆತಂಕ ವ್ಯಕ್ತಪಡಿಸಿದರು.

'ಎನ್‌ಎಂಸಿಯಲ್ಲಿ 20 ಸದಸ್ಯರು ಇರಲಿದ್ದಾರೆ. ಅವರನ್ನು ಕೇಂದ್ರವೇ ನೇಮಕ ಮಾಡುತ್ತದೆ. ರಾಜಕಾರಣಿಗಳು ಹಾಗೂ ಖಾಸಗಿ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರನ್ನೇ ಸದಸ್ಯರಾಗಿ ನೇಮಕಗೊಳ್ಳುವ ಸಾಧ್ಯತೆ ಇದೆ. ಇದರಿಂದ ಸೀಟುಗಳ ಹಂಚಿಕೆ ವೇಳೆ ಅವರ ಹಸ್ತಕ್ಷೇಪ ಹೆಚ್ಚಲಿದೆ. ಆದ ಕಾರಣ ಎನ್‌ಎಂಸಿ ರಚನೆ ಮಾಡಬಾರದು' ಎಂದು ಒತ್ತಾಯಿಸಿದರು.

ಸಂಘದ ಕಾರ್ಯದರ್ಶಿ ಡಾ.ಎಸ್.ಸಿ.ದೇವರಾಜ್, ಸದಸ್ಯರಾದ ಡಾ.ಆನಂದ್, ಡಾ.ವೀರೇಗೌಡ, ಡಾ.ನರೇಂದ್ರ, ಡಾ.ವಂದನಾ, ಡಾ.ಆಶಾ, ಡಾ.ಶಂಕರ್, ಡಾ. ಬಾಲಾಜಿ, ಡಾ.ಕೃಷ್ಣಯ್ಯಶೆಟ್ಟಿ ಪಾಲ್ಗೊಂಡಿದ್ದರು.

ಪ್ರಜಾವಾಣಿ




ಅಭಿಷೇಕ್


ಕಾವ್ಯಾ


ಮೋನಿಕಾ


ಪೂಜಾ


ಪ್ರಿಯಾಂಕಾ


ಸೌಮ್ಯ

# ಎಸ್‌ಡಿಯುಎಎಚ್‌ಇಆರ್ ಘಟಿಕೋತ್ಸವ

ಪ್ರಜಾವಾಣಿ ವಾರ್ತೆ

ಕೋಲಾರ: 'ಸಂಸ್ಥೆಯ ಎಂಟನೇ ಘಟಿಕೋತ್ಸವವನ್ನು ವೈದ್ಯಕೀಯ ಕಾಲೇಜಿನ ರಜತ ಮಹೋತ್ಸವ ಸಭಾಂಗಣದಲ್ಲಿ ಮಾ.21ರಂದು ಬೆಳಿಗ್ಗೆ 11ಕ್ಕೆ ಹಮ್ಮಿಕೊಳ್ಳಲಾಗಿದೆ' ಎಂದು ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದ (ಎಸ್‌ಡಿಯುಎಎಚ್‌ಇಆರ್) ಉಪ ಕುಲಪತಿ ಡಾ.ಸಿ.ವಿ.ರಘುವೀರ್ ತಿಳಿಸಿದರು.

ನಗರದಲ್ಲಿ ಸೋಮವಾರ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ, 'ಘಟಿಕೋತ್ಸವದಲ್ಲಿ ಸಂಸ್ಥೆಯ 249 ಮಂದಿ ವೈದ್ಯಕೀಯ ಪದವೀಧರರಿಗೆ ಪದವಿ ಪ್ರದಾನ ಮಾಡಲಾಗುತ್ತದೆ. ಸ್ನಾತಕೋತ್ತರ ಪದವಿ ಮತ್ತು ಡಿಪ್ಲೊಮಾ ಕೋರ್ಸ್‌ನ ತಲಾ 5 ವಿದ್ಯಾರ್ಥಿಗಳಿಗೆ ಹಾಗೂ ಎಂಬಿಬಿಎಸ್ ವಿದ್ಯಾರ್ಥಿನಿಗೆ ಚಿನ್ನದ ಪದಕ ನೀಡಲಾಗುತ್ತದೆ' ಎಂದು ಹೇಳಿದರು.

'ವಿದ್ಯಾರ್ಥಿಗಳಾದ ಡಾ.ಎನ್.ಮೋನಿಕಾ, ಡಾ.ಸಿ.ಸೌಮ್ಯ, ಡಾ.ಪೂಜಾ, ಡಾ.ಕೆ.ಎಂ.ಅಭಿಷೇಕ್, ಡಾ.ಪ್ರಿಯಾಂಕಾ ಮತ್ತು ಡಾ.ಕಾವ್ಯಾ ಚಿನ್ನದ ಪದಕ ಗಳಿಸಿದ್ದಾರೆ' ಎಂದು ವಿವರಿಸಿದರು.

'ಬೆಂಗಳೂರಿನ ಮಣಿಪಾಲ್ ಹೆಲ್ತ್ ಎಂಟರ್‌ಪ್ರೈಸಸ್ ಪ್ರೈವೇಟ್ ಲಿಮಿಟೆಡ್ ಅಧ್ಯಕ್ಷ ಡಾ.ಎಚ್.ಸುದರ್ಶನ್ ಬಲ್ಲಾಳ್ ಘಟಿಕೋತ್ಸವ ಭಾಷಣ ಮಾಡುತ್ತಾರೆ. ಸಂಸ್ಥೆಯ ಕುಲಪತಿ ಡಾ.ಎಸ್.ಕುಮಾರ್ ಅಧ್ಯಕ್ಷತೆ ವಹಿಸುತ್ತಾರೆ. ಸಂಸ್ಥೆ ಉಪಾಧ್ಯಕ್ಷ ಡಾ.ರಾಜೇಶ್ ಎನ್.ಜಗದಾಳೆ ಅತಿಥಿಯಾಗಿ ಭಾಗವಹಿಸುತ್ತಾರೆ' ಎಂದು ಮಾಹಿತಿ ನೀಡಿದರು.

ಸಂಸ್ಥೆಯ ಕುಲಸಚಿವ ಡಾ.ಎ.ವಿ.ಎಂ.ಕುಟ್ಟಿ, ಪ್ರಾಂಶುಪಾಲ ಡಾ.ಹರೇಂದ್ರ ಕುಮಾರ್, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಡಿ.ವಿ.ಎಲ್.ಎನ್.ಪ್ರಸಾದ್, ವೈದ್ಯಕೀಯ ಸೂಪರಿಂಟೆಂಡೆಂಟ್ ಡಾ.ಲಕ್ಷ್ಮಯ್ಯ ಹಾಜರಿದ್ದರು.

## ಜೇನುನೊಣ ಕಡಿದು ಓರ್ವ ವ್ಯಕ್ತಿಯ ಸಾವು

ಮಾಲೂರು ಮಾ ೧೯

ಜೇನುನೊಣಗಳು ಕಚ್ಚಿದ್ದರಿಂದ ವ್ಯಕ್ತಿಯೊಬ್ಬ ಮೃತಪಟ್ಟು ಇಪ್ಪತ್ತಕ್ಕೂ ಅಧಿಕ ಮಂದಿ ಗಾಯಗೊಂಡಿರುವ ಘಟನೆ ವರದಿಯಾಗಿದೆ.

ತಾಲೂಕಿನ ಚಿಕ್ಕತಿರುಪತಿಯ ಪ್ರಸನ್ನ ವೆಂಕಟರಮಣ ಸ್ವಾಮಿ ದೇವಸ್ಥಾನದ ಬಳಿಯ ತೋಪಿನಲ್ಲಿ ಕೆಲವರು ಅಡುಗೆ ಮಾಡುತ್ತಿದ್ದಾಗ ಹೊಗೆಯಿಂದ ಕೆರಳಿದ ಜೇನುಗಳು ಜನರ ಗುಂಪಿನ ಮೇಲೆ ಎರಗಿ ಸಿಕ್ಕಿದ ಕಡೆಯಲ್ಲೆಲ್ಲ ಕಡಿದಿವೆ. ತೀವ್ರ ಗಾಯಗೊಂಡವರನ್ನು ಸ್ಥಳೀಯ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿದಾಗ ತ್ಯಾಗರಾಜು(೩೫) ಅಸು ನೀಗಿದ್ದಾರೆ. ಗಾಯಾಳುಗಳಲ್ಲಿ ಇಬ್ಬರ ಸ್ಥಿತಿ ಗಂಭೀರವಾಗಿದೆ.

## ದೇವರಾಜ ಅರಸು ವಿ.ವಿ.ಯಲ್ಲಿ ನಾಳೆ ಎಂಟನೇ ಘಟಿಕೋತ್ಸವ

# ೨೪೧ ಪದವೀಧರರಿಗೆ ಪದವಿ ಪ್ರದಾನ

### ೮ನೇ ಘಟಿಕೋತ್ಸವ ಚಿನ್ನದ ಪದಕ ಸ್ವೀಕರಿಸಲಿರುವ ಪ್ರತಿಭೆಗಳು



ಡಾ॥ಮೋನಿಕಾ ಎಸ್. ಎಂ.ಬಿ.ಬಿ.ಎಸ್ ಚಿಂತಾಮಣಿ



ಡಾ॥ಸಿ.ಸೌಮ್ಯ ಫಾರ್ಮಕಾಲಜಿ ಎಂ.ಡಿ ಬೆಂಗಳೂರು



ಡಾ॥ಅಭಿಷೇಕ್ ಕೆ.ಎಂ ಅನಸ್ತಾಲಜಿ ಎಂ.ಡಿ ಬೆಂಗಳೂರು



ಡಾ॥ ಪೂಜಾ ಹರ್ಷ ಎಂ.ಎಸ್. ರಿನೋಲಾರ್ಜಿನೋಲಜಿ



ಡಾ॥ಪ್ರಿಯಾಂಕದಾಸ್ ಡಿಪ್ಲೋಮಾ ಅನಸ್ತೇಷಾಲಜಿ



ಡಾ॥ ಕಾವ್ಯ ಆಪ್ತಮಾಲಜಿ ಡಿಪ್ಲೋಮಾ

ಕೋಲಾರ ಮಾ ೧೯

ನಗರದ ಹೊರವಲಯದ ಟಮಕದ ಶ್ರೀದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೇಮಿಯ ಎಂಟನೇ ಘಟಿಕೋತ್ಸವ ಇದೇ ೨೧ರಂದು ನಡೆಯಲಿದ್ದು, ೨೪೧ ಪದವೀಧರರು ಪ್ರಮಾಣ ಪತ್ರ ಸ್ವೀಕರಿಸಲಿದ್ದಾರೆಂದು ಉಪಕುಲಪತಿ ಡಾ॥ ಸಿ.ವಿ. ರಘುವೀರ್ ಅವರು ಪತ್ರಿಕಾ ಗೋಷ್ಠಿಯಲ್ಲಿ ಪ್ರಕಟಿಸಿದರು.

ಕಾಲೇಜಿನ ವಿವಿಧ ವಿಭಾಗಗಳ ಆರು ಮಂದಿ ಚಿನ್ನದ ಪದಕ ಗಳಿಸಿದ್ದಾರೆಂದೂ, ೧೯೨ ಮಂದಿ ಪ್ರತ್ಯಕ್ಷವಾಗಿ ಹಾಗೂ ೪೯ ಮಂದಿ ಗೈರು ಹಾಜರಿಯಲ್ಲಿ ಪ್ರಮಾಣಪತ್ರ ಪಡೆಯಲಿದ್ದಾರೆಂದೂ, ಚಿಂತಾಮಣಿಯ ಡಾ॥ಎಸ್.ಮೋನಿಕಾ ಅವರು ವೈದ್ಯಕೀಯ ಶಾಸ್ತ್ರದಲ್ಲಿ ಚಿನ್ನದ ಪದಕಕ್ಕೆ ಭಾಜನರಾಗಿದ್ದಾರೆಂದೂ ರಘುವೀರ್ ಹೇಳಿದರು.

ಬೆಂಗಳೂರಿನ ಮಣಿಪಾಲ್ ಹೆಲ್ತ್ ಎಂಟರ್‌ಪ್ರೈಸಸ್ ಪ್ರೈ., ಲಿಮಿಟೆಡ್‌ನ ಅಧ್ಯಕ್ಷ ಡಾ॥ ಎಚ್. ಸುದರ್ಶನ್ ಬಲ್ಲಾಳ್ ಘಟಿಕೋತ್ಸವ ಭಾಷಣ ಮಾಡುವರು. ಸಂಸ್ಥೆಯ ಕುಲಪತಿ ಡಾ॥ ಎಸ್.ಕುಮಾರ್ ಘಟಿಕೋತ್ಸವದ ಅಧ್ಯಕ್ಷತೆ ವಹಿಸುವರು. ಸಂಸ್ಥೆಯ ಉಪಾಧ್ಯಕ್ಷ ಡಾ॥ ರಾಜೇಶ್ ಎನ್.ಜಗದಾಳೆ ಭಾಗವಹಿಸುತ್ತಾರೆ ಎಂದು ವಿವರಿಸಿದರು.

ಸಂಸ್ಥೆಯ ರಿಜಿಸ್ಟ್ರಾರ್ ಡಾ॥ ಎ.ವಿ.ಎಂ.ಕುಟ್ಟಿ, ಪ್ರಾಂಶುಪಾಲ ಡಾ॥ ಹರೇಂದ್ರಕುಮಾರ್, ಪರೀಕ್ಷಾ ನಿಯಂತ್ರಣಾಧಿಕಾರಿ, ಡಾ॥ ಡಿ.ವಿ.ಎಲ್.ಎನ್. ಪ್ರಸಾದ್, ಆರೋಗ್ಯ ಅಧೀಕ್ಷಕ ಡಾ.ಲಕ್ಷ್ಮಯ್ಯ ಗೋಷ್ಠಿಯಲ್ಲಿ ಹಾಜರಿದ್ದರು.